ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 29.12.2025.

**<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>**

ನಿಪಿ-9 ರಲ್ಲಿ ನಾನು ಸಹಿ ಮಾಡಿದ್ದು, ಅದನ್ನು ಸುಮಾರು 14 ವರ್ಷಗಳ ಹಿಂದೆ ಸಮಯ ಬಳಗ್ಗೆ 9, 10 ರಿಂದ 1 ಗಂಟೆ ಕಾಲ ಚಿತ್ರಾವತಿ ಡ್ಯಾಂ ಬಳಿ ಅಪಘಾತ ಸಂಬಂಧ ಮಾಡಿರುತ್ತೇನೆ. ಅಪಘಾತವು ನಟರಾಜ್ ಎಂಬುವವರಿಗೆ ಉಂಟಾಗಿರುತ್ತದೆ. ನನ್ನ ಸಮಕ್ಷಮ ಯಾರು ಸಹಿ ಮಾಡಿಲ್ಲ. ದಿನಾಂಕ 25.11.2017 ರಂದು ಬೆಳಗ್ಗೆ 10.30 ರಿಂದ 12.30 ಸಮಯದಲ್ಲಿ ನಟರಾಜ್ ರವರಿಗೆ ಆಗಿರುವ ಅಪಘಾತ ಸಂಬಂಧ ಚಾಸಾ-4 ರವರ ವಾಸದ ಮನೆಯ ಬಳಿ, ಅವರು ತೋರಿಸಿದ ಸ್ಥಳದಲ್ಲಿ ನಿಪಿ-9 ರಂತೆ ಪೊಲೀಸರು ಸ್ಥಳ ಪಂಚನಾಮೆ ನಡೆಸಿದರು. ಅಲ್ಲದೆ ನಟರಾಜ್ ರವರು ಸದರಿ ಸ್ಥಳದಲ್ಲಿ ಮೃತಪಟ್ಟ ಬಗ್ಗೆ ಪಂಚನಾಮೆ ಜರುಗಿಸಿದರು ಎಂದರೆ ಸರಿ. ನನ್ನ ಜೊತೆ ಚಾಸಾ-4 ಮತ್ತು 14 ರವರು ಸಹಿ ಮಾಡಿದರು ಎಂದರೆ ಸರಿ.

**<u>ಪಾಟೀ ಸವಾಲು : ಶ್ರೀ ಕೆ.ಎಸ್. ಆರ್.ವಕೀಲರಿಂದ, ಆರೋಪಿ ಪರವಾಗಿಃ</u>**

ನಾನು ಸಹಿ ಮಾಡಿದ ಸ್ಥಳದ ಚಕ್ಕು ಬಂದಿ ಪೂರ್ವಕ್ಕೆ -ರಸ್ತೆ, ಪಶ್ಚಿಮಕ್ಕೆ -ರಸ್ತೆ, ಉತ್ತರ ಮತ್ತು ದಕ್ಷಿಣಕ್ಕೆ ರಸ್ತೆ ಇದೆ ಎಂದು ನುಡಿಯುತ್ತಾರೆ. ನಿಪಿ-9 ಕ್ಕೆ ಚಿತ್ರಾವತಿ ಡ್ಯಾಂ ಬಳಿ ಸಹಿ ಮಾಡಿದ್ದೇನೆ. ಆ ಸಹಿ ಹೊರತು ಪಡಿಸಿ, ಈ ಪ್ರಕರಣ ಸಂಬಂಧ ನಾನು ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಯಾರು ಸಹಿ ಮಾಡಿದ್ದಾರೆ ಗೊತ್ತಿಲ್ಲ. ನಾನು ಸಹಿ ಮಾಡುವಾಗ ಸುಮಾರು 20 ರಿಂದ 30 ಜನ ಸೇರಿದ್ದರು.

**<u>ಮರುವಿಚಾರಣೆಃ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.